# ಆಹಾ ಸುದ್ದಿ!

★ ಸಸಿತೋಟ

ಟ್ರಿನಿಡಾಡ್ ಹಾಗೂ ಟೊಬ್ಯಾಗೋದಲ್ಲಿ ಗುಲಾಮಗಿರಿ ಕಾಲದಲ್ಲಿದ್ದ ಬಡಿಗೆಯಿಂದ ಬಡಿದಾಟ ಸ್ಪರ್ಧೆ ಇನ್ನೂ ಚಾಲ್ತಿಯಲ್ಲಿದೆ. ಎದುರಾಳಿಯ ಮೈಗೆ ಏಟಿನಿಂದ ರಕ್ತ ಬಂದಾಗ ವಿಜೇತರನ್ನು ಘೋಷಿಸುತ್ತಾರಂತೆ. 'ಕಿಂಗ್ ಆಫ್ ದಿ ರಾಕ್' ಎಂಬ ಬಿರುದು ಬೇರೆ. ಅಲ್ಲಿಯ 'ಸ್ಟಿಕ್ ಫೈಟಿಂಗ್' ಅನ್ನೇ ಇಲ್ಲಿಯ ಲಾಠಿ ಚಾರ್ಜ್‌ಗೆ ಬದಲಾಯಿಸಿಕೊಂಡಿರಬಹುದಾ?



ವೇಗದ ಬದುಕಿನೊಂದಿಗೆ ಗುದ್ದಾಡುವವರಿಗಾಗಿ ಈ ಕಾರು. ಗಾಲಿ ಮೇಲೆ ಆರಾಮ ಕೊಠಡಿ ಮತ್ತು ಕಚೇರಿ. ಚಾಲನೆ ಮಾಡುವ ಅಗತ್ಯವಿಲ್ಲದೇ ತಾನಾಗೇ ಓಡುವ ಸ್ವಿಸ್ ಕಂಪೆನಿಯ ಈ ರಿನ್‌ಸ್ಪೀಡ್ ಎಕ್ಸ್‌ಚೇಂಜ್1 ಕಾರಿನಲ್ಲಿ ಆರಾಮವಾಗಿ ಬಿದ್ದುಕೊಂಡು ಏನೇನು ಮಾಡಬಹುದೋ ಅದೆಲ್ಲಾ ಮಾಡಬಹುದು. ಅಂದರೆ ಓದಬಹುದು, ಟಿವಿ ನೋಡಬಹುದು, ಸಂಗೀತ ಕೇಳಬಹುದು. ಗಂಟೆಗೆ 120 ಕಿ.ಮೀ. ವೇಗದಲ್ಲಿ ಚಲಿಸುವಾಗ ಸಿಬ್ಬಂದಿ ಜೊತೆ ಕುಳಿತು ಮೀಟಿಂಗ್ ಮಾಡಬಹುದು. ಸಿಬ್ಬಂದಿ ಮೇಲೆ ಕೋಪ ಬಂದು 'ಗೆಟೌಟ್' ಎಂದು ಬಯ್ದರೆ ಹುಷಾರಾಗಿರಬೇಕಷ್ಟೆ.

ಅಮೆರಿಕದಲ್ಲಿ ಅಧ್ಯಕ್ಷ ಒಬಾಮ ಮೂರು ವರ್ಷಗಳ ಹಿಂದೆ ಆರಂಭಿಸಿದ ಆನ್‌ಲೈನ್ ಅರ್ಜಿ ಕಾರ್ಯಕ್ರಮದ ಸಮಸ್ಯೆ ಬಹಿರಂಗಪಡಿಸಲು ಹೋದವನೊಬ್ಬ ಇತಿಹಾಸ ನಿರ್ಮಿಸಿಬಿಟ್ಟಿದ್ದಾನೆ. ರೋಜರ್ ಎಂಬಾತ ಖ್ಯಾತ ಗಾಯಕ 'ಜಸ್ಟಿನ್ ಬೀಬರ್‌ನನ್ನು ಹೊರಹಾಕಿ ಹಾಗೂ ಆತನ ಹಸಿರು ಕಾರ್ಡ್ ರದ್ದುಪಡಿಸಿ' ಎಂದು ಸಲ್ಲಿಸಿದ್ದ ಅರ್ಜಿಗೆ 2.6 ಲಕ್ಷ ಸಹಿಗಳು ಬಿದ್ದಿವೆಯಂತೆ. ಈಗ ಒಬಾಮ ಸರ್ಕಾರ ಈ ಅರ್ಜಿಯನ್ನು ಇತ್ಯರ್ಥಪಡಿಸಬೇಕಾದ ಪರಿಸ್ಥಿತಿ ಬಂದು ಬಿಟ್ಟಿದೆ. ಕೈ ಕೈ ಹಿಸುಕಿಕೊಳ್ಳಬೇಕಾಗಿರುವವರು ಯಾರೋ!





ಅಮೆರಿಕಾದ ಮಾರಿಕೋಪ ಕೌಂಟಿಯ ಈ ಡುಮ್ಮಿ ಬೆಕ್ಕು ಮೆಟಾಬಾಲ್‌ನ ತೂಕ ಬರೋಬ್ಬರಿ 15 ಕೆಜಿ. ಮಾಲೀಕ ಸಾಕಲಾರದೇ ಪ್ರಾಣಿ ದಯಾ ಸಂಘಕ್ಕೆ ನೀಡಿದ್ದಾನಂತೆ. ಬೆಕ್ಕು ಕೊಬ್ಬಿದಷ್ಟೂ ಮಾಲೀಕನಿಗೇ ನಷ್ಟ. ತೂಕ ಹೆಚ್ಚಿಸಿದ್ದು ಯಾವ ಆಹಾರ ಎಂದು ತನಿಖೆ ನಡೆಸಿದಾಗ ಗೊತ್ತಾಗಿದ್ದು, ಆ ಮಾಜಿ ಮಾಲೀಕ ಮನುಷ್ಯರು ತಿನ್ನುವ ಆಹಾರವನ್ನೇ ಬೆಕ್ಕಿಗೆ ಹಾಕಿದ್ದನಂತೆ. ಬೆಕ್ಕುಗಳಿಗೆ ಡಯಟ್ ಗೊತ್ತಿದ್ದರೆ ಮನುಷ್ಯನನ್ನು ಕಂಡರೇ ಓಡುತ್ತಿದ್ದವೇನೋ!

ಆಸ್ಟ್ರೇಲಿಯಾದ ಖ್ಯಾತ ಸಿಡ್ನಿ ಹಾರ್ಬರ್ ಸೇತುವೆ ಮೇಲೆ ವ್ಯಾಲೆಂಟೈನ್ ದಿನದಂದು ಪ್ರೇಮಿಗಳ ಜೋಡಿಗಳಿಗೆ ಸೇತುವೆ ನಡಿಗೆ ಅವಕಾಶ ನೀಡಲಾಗಿತ್ತು. ಸಿಂಗಪುರದ ಅನಂತನ್ ಹಾಗೂ ಹರ್ಷಿಣಿ ಈ ಗೌರವ ಪಡೆದರಲ್ಲದೇ ಅಲ್ಲಿಯೇ ನಿಶ್ಚಿತಾರ್ಥವೂ ನಡೆಯಿತಂತೆ. ನಿಶ್ಚಿತಾರ್ಥಕ್ಕೆ ಸೇತುವೆ ನಡಿಗೆ, ಮದುವೆಯಾದ ನಂತರ ಹಗ್ಗದ ಮೇಲಿನ ಸರ್ಕಸ್ ನಡಿಗೆ.



ಡೆಟ್ರಾಯಿಟ್‌ನಲ್ಲಿ 40 ವರ್ಷಗಳ ಹಿಂದೆ ಕದ್ದ ಫೋಕ್ಸ್‌ವ್ಯಾಗನ್ ಬೀಟಲ್ ಕಾರನ್ನು ಈಗ ಪತ್ತೆ ಮಾಡಿದ್ದಾರಂತೆ. ಆಗ ಕೆಂಪು ಬಣ್ಣವಿದ್ದ ಕಾರು ಈಗ ಬಿಳಿಯಾಗಿದೆ ಅಷ್ಟೆ. ವಯಸ್ಸಾದ ಮೇಲೆ ಕೂದಲು ಬೆಳ್ಳಗಾದ ಹಾಗೆ. ಆದರೆ ಕಳುವಿನ ದೂರು ಕೊಟ್ಟಿದ್ದ ಕಾರಿನ ಮಾಲೀಕ ಮಾತ್ರ ಪತ್ತೆಯಾಗಿಲ್ಲವಂತೆ. ಪೊಲೀಸರು ಹೊಸ ತಲೆನೋವು ಎಂದು ಕಾರನ್ನಿಟ್ಟುಕೊಂಡು ಕಾಯುತ್ತಿದ್ದಾರೆ.